ದಿನಾಂಕ : 5-12-2015

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊದಿಸಲಾಯಿತು.

ಪಾಟೀ ಸವಾಲು : 1 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ

ನಾನು 1 ನೇ ತರಗತಿ ಓದಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಜಮೀನನ್ನು ನಾನು ಮತ್ತು ಉಳವಪ್ಪ ಖರೀದಿಸಿರುವ ಬಗ್ಗೆ ಬರೆಯಲಾಗಿದೆ. ನಾನು ನನ್ನ ಜಮೀನಿನ ಬಗ್ಗೆಯೂ ಸಹ ಸಾಕ್ಷಿ ಹೇಳುತ್ತಿದ್ದೇನೆ. ಆದರೆ ನನ್ನ ಜಮೀನು ಈ ದಾವಾ ಆಸ್ತಿ ಆಗಿರುವುದಿಲ್ಲ. ವಾದಿ ದಾವಾ ಆಸ್ತಿಯನ್ನು 1940 ನೇ ಸಾಲಿನಲ್ಲಿ ಖರೀದಿಸಿರುತ್ತಾನೆ, ಅದನ್ನು ವಾದಿಯರ ತಂದೆ ಖರೀದಿಸಿರುವುದಾಗಿ ಹೇಳಿರುತ್ತಾರೆ. ವಾದಿಯ ತಂದೆ ಅದನ್ನು 1940 ಖರೀದಿಸಿರುವುದಾಗಿ ಹೇಳಿರುತ್ತಾರೆ, ನಾನು ಸಾಕ್ಷಿಯನ್ನು ಸರ್ವೆ ನಂ. 15/3 ಆಸ್ತಿಯ ಬಗ್ಗೆ ಹೇಳಲು ಬಂದಿರುತ್ತೇನೆ. ಇದು ವಾದಿಯ ತಂದೆಯ ಹೆಸರಿಗೆ ಇರುತ್ತದೆ. ಆ ರೀತಿ ವಾದಿಯ ತಂದೆಯ ಹೆಸರಿಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದು 1 ನೇ ಪ್ರತಿವಾದಿಯ ಹೆಸರಿಗೆ ದಾಖಲಿದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. 15/3 ಇದು ವಾದಿ ಹಾಗೂ ಪ್ರತಿವಾದಿಯರ ಕುಟುಂಬದ ಮೂಲ ಆಸ್ತಿ ಎಂದರೆ ಸಾಕ್ಷಿಯು ಖರೀದಿಸಿದ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿಯು ಬಸಪ್ಪ ಈತನ ಮೂಲ ಆಸ್ತಿ ಎಂದರೆ ಸರಿಯಲ್ಲ. ಬಸಪ್ಪ ಮರಣ ಹೊಂದಿದ ನಂತರ ಅದು ಶಿವಪ್ಪ ಹಾಗೂ ಬಸವಣ್ಣೆಪ್ಪ ಇವರ ಹೆಸರಿಗೆ ದಾಖಲಾಯಿತು ಎಂದರೆ ಸರಿಯಲ್ಲ. ನಂತರ ಶಿವಪ್ಪ ಮರಣ ಹೊಂದಿದ ನಂತರ ಅದು ರುದ್ರಪ್ಪನ ಹೆಸರಿಗೆ ದಾಖಲಾಯಿತು ಎಂದರೆ ರುದ್ರಪ್ಪ ಮತ್ತು ಉಳವಪ್ಪನ ಹೆಸರಿಗೆ ದಾಖಲಾಯಿತು ಎಂದು ಹೇಳುತ್ತಾರೆ, 1997 ವರೆಗೆ ಕೇವಲ ರುದ್ರಪ್ಪನ ಹೆಸರಿಗೆ ಮಾತ್ರ ದಾಖಲಿತ್ತು ಎಂದರೆ ಸರಿಯಲ್ಲ. 1962 ರಲ್ಲಿ ಈ ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ವಾಟ್ನಿ ಆಗಿತ್ತು ಎಂದರೆ ಸರಿಯಲ್ಲ. ಅನಂತರ 1997 ರಲ್ಲಿ ಅದು ಲಿಖಿತವಾಗಿ ವಾಟ್ನಿ ಮಾಡಿಕೊಂಡರು ಎಂದರೆ ಸರಿಯಲ್ಲ, ಆ ಪ್ರಕಾರ ಸರ್ವೆ ನಂ. 15/3 ಇದು 1 ನೇ ಪ್ರತಿವಾದಿಯ ಹೆಸರಿಗೆ ಬಂತು ಎಂದರೆ ಸರಿಯಲ್ಲ. ಆ ಪ್ರಕಾರ ಎಂ಼ಇ ನಂ. 2357 ಸಹ

ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಈಗ ಪ್ರಸ್ತುತ ಸರ್ವೆ ನಂ. 15/3 ಇದು 1 ನೇ ಪ್ರತಿವಾದಿಯ ಹೆಸರಿಗೆ ದಾಖಲಿರುತ್ತದೆ ಎಂದರೆ ಸರಿಯಲ್ಲ. ಮತ್ತು ಸದರಿ ಆಸ್ತಿಯನ್ನು ಈಗಲೂ ಸಹ 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯ ಇದೇ ಜಮೀನಿನ ಕೂಡುಸಾಲಿನ ವಿಷಯದ ಕುರಿತು ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಈಗ 1 ತಿಂಗಳ ಹಿಂದೆಯೂ ಸಹ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯ ಕಡಲೆ ಬಿತ್ತುವ ವಿಷಯದ ಕುರಿತು ಜಗಳ ಆಗಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಬದುವಿನ ಮೇಲೆ ಬೇವಿನ ಗಿಡಗಳು ಇದ್ದು ಅವುಗಳ ಮಾಲೀಕತ್ವದ ವಿಷಯದ ಕುರಿತು ಸಹ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯ ಜಗಳ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಒಂದು ದ್ವೇಷದಿಂದಲೇ ನಾನು ಈಗ ಸದರಿ ಸರ್ವೆ ನಂ. 15/3 ಇದು 1 ನೇ ಪ್ರತಿವಾದಿಯ ಸ್ವಾಧೀನತೆಯಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ನಮ್ಮ ಆಸ್ತಿಯ ಪಹಣಿಯಲ್ಲಿ ನನ್ನ ಚಿಕ್ಕಪ್ಪನ ಜಮೀನು ಸಹ ಇರುತ್ತದೆ, ಸದರಿ ಆ ಜಮೀನನ್ನು ಸಂಪೂರ್ಣ ಗಿಡ್ಡಪ್ಪ ಈತನೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಪ್ರತಿವಾದಿ ಪರ ವಕೀಲರಿಂದ

ಈ ದಾವೆಯನ್ನು ಸದೆಪ್ಪ ಉಳವಪ್ಪನ ಮೇಲೆ ಮಾಡಿರುತ್ತಾನೆ. ಈ ದಾವೆಯನ್ನು ಸರ್ವೆ ನಂ. 71 ರ ಕುರಿತು ಮಾಡಿರುತ್ತಾರೆ. ನಾನು ಸದೆಪ್ಪ ಸಲ್ಲಿಸಿದ ದಾವೆಯಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಮತ್ತು ಈ ದಾವೆಯನ್ನು ಸರ್ವೆ ನಂ. 15/3 ರ ಮತ್ತು 92 ಇವುಗಳ ಕುರಿತು ಮಾಡಿರುತ್ತಾರೆ. ಬೇರೆ ಆಸ್ತಿಗಳ ಕುರಿತು ದಾವೆ ಮಾಡಿರುವುದಿಲ್ಲ. ಇವುಗಳು ನೇಗಿನಹಾಳ ಮತ್ತು ಯಡಾಲ ಗ್ರಾಮದಲ್ಲಿ ಬರುತ್ತವೆ. ನಾನು ಹಾಜರುಪಡಿಸಿದ ಪಹಣಿ ಪತ್ರಿಕೆಯಲ್ಲಿ ಹೇಳಿದ ಆಸ್ತಿ ಯಡಾಲ ಗ್ರಾಮದಲ್ಲಿ ಬರುತ್ತದೆ. ನನ್ನ ಹೆಸರಿನಲ್ಲಿ ನೇಗಿನಹಾಳ ಹಾಗೂ ದೇವಲಾಪುರ ಗ್ರಾಮಗಳ ಹದ್ದಿಯಲ್ಲಿ ಜಮೀನು ಇರುವುದಿಲ್ಲ. ಆದ್ದರಿಂದ

ಈ ವಾದಿ ಮತ್ತು ಪ್ರತಿವಾದಿಯರು ಯಾವ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಸ್ವಂತಕ್ಕೆ ಗೊತ್ತಿರುವುದಿಲ್ಲ. ನೇಗಿನಹಾಳದ ಗ್ರಾಮದ ಸರ್ವೆ ನಂ. 71 ನ್ನು ವಾದಿ ಮತ್ತು ರುದ್ರಪ್ಪ ಸಾಗುವಳಿ ಮಾಡುತ್ತಿದ್ದಾರೆ. ದೇವಲಾಪುರ ಹದ್ದಿಯಲ್ಲಿನ ಜಮೀನನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾನೆ. ಅವರು ವಾಟ್ನಿ ಆದ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದಾರೆ. ಸಾಕ್ಷಿಯು ಮುಂದುವರೆದು ವಾಟ್ನಿ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಈ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿ ಮತ್ತು 2 ನೇ ಪ್ರತಿವಾದಿ ಈಗ ಬೇರೆ ಬೇರೆ ವಾಸವಾಗಿದ್ದಾರೆ. ಆ ರೀತಿ ಅವರು 20 ವರ್ಷಗಳಿಂದ ವಾಸವಾಗಿದ್ದಾರೆ. ಅವರು ತಮ್ಮ ಕುಟುಂಬದ ಆಸ್ತಿಗಳಲ್ಲಿ ತಮ್ಮ ಪಾಲನ್ನು ಪಡೆದುಕೊಂಡೇ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಈ ವಾದಿ ಮತ್ತು 2 ನೇ ಪ್ರತಿವಾದಿ ಬೇರೆ ಬೇರೆ ವಾಸವಾಗುವ ಪೂರ್ವದಲ್ಲಿ ಅವರ ಅಜ್ಜರಾದ ಶಿವಪ್ಪ ಮತ್ತು ಬಸವಣ್ಣೆಪ್ಪ ಅವರೂ ಸಹ ಬೇರೆ ಬೇರೆ ವಾಸವಾಗಿದ್ದರು ಎಂದರೆ ಸರಿ. ಆದರೆ ಅವರ ಅಜ್ಜಂದಿರು ಎಷ್ಟು ವರ್ಷದ ಹಿಂದೆ ಆ ರೀತಿ ಬೇರೆ ಆಗಿದ್ದರು ಎಂದು ಗೊತ್ತಿರುವುದಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿ ತಾವು ಬೇರೆ ಬೇರೆ ವಾಸವಾಗಿದ್ದ ದಿನದಿಂದಲೇ ತಮ್ಮ ತಮ್ಮ ಆಸ್ತಿಗಳನ್ನು ಪ್ರತ್ಯೇಕವಾಗಿಯೇ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಆದರೆ ಅವರ ಮಧ್ಯ ಲಿಖಿತವಾದ ಪಾಲು ವಿಭಾಗ ಆಗಿರುವ ದಾಖಲೆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಶಿವಪ್ಪ ಮತ್ತು ಬಸವಣ್ಣೆಪ್ಪ ಇವರುಗಳು ತಾವು ವಿಭಾಗ ಮಾಡಿಕೊಂಡ ಆಸ್ತಿಗಳನ್ನು ಅವರ ವಾರಸುದಾರರು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳನ್ನು ವಾದಿಯೇ ಸಾಗುವಳಿ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ

ಹೆ ಪ್ರ ದ ನ್ಯಾ ದಂ, ಬೈಲಹೊಂಗಲ